■ ಹನಿ

# ಕಾರ್ಲೋಸ್ ಸಂಪತ್ತು



ಹೊಸ ವರ್ಷದ ಆರಂಭದಲ್ಲಿ 'ಜಗತ್ತಿನ ಅತ್ಯಂತ ಶ್ರೀವಂತರ ಪಟ್ಟಿ' ಮತ್ತೆ ಪ್ರಕಟವಾಗಿದೆ. ನಿರೀಕ್ಷೆಯಂತೆ ಮೆಕ್ಸಿಕೋದ ಉದ್ಯಮಿ ಕಾರ್ಲೋಸ್ ಸ್ಲಿಮ್ ಜಗತ್ತಿನ ಅತಿ ದೊಡ್ಡ ಶ್ರೀಮಂತರಾಗಿ ಹೊರಹೊಮ್ಮಿದ್ದಾರೆ. ಸದ್ಯಕೆ ಈತನ ಆಸ್ತಿಯ ಮೊತ್ತ 75.8 ಶತಕೋಟಿ ಡಾಲರ್. ಕಳೆದ ವರ್ಷವೂ ಮೊದಲ ಸ್ಥಾನದಲ್ಲಿದ್ದ ಈತನ ಸಂಪತ್ತು 2012ರ ಕೊನೆಗೆ 13.4 ಶತಕೋಟಿ ಡಾಲರ್‌ಗಳಷ್ಟು ವೃದ್ಧಿಯಾಗಿದೆ. ಮೆಕ್ಸಿಕೋದಲ್ಲಿ ಸರಕಾರಕ್ಕಿಂತ ಹೆಚ್ಚು ಉದ್ಯೋಗಗಳನ್ನು ತನ್ನ ಕಂಪೆನಿಗಳ ಮೂಲಕ ಒದಗಿಸಿರುವ ಕಾರ್ಲೋಸ್ ಸ್ಲಿಮ್, ಕೈ ಇಡದ ಉದ್ದಿಮೆಗಳಿಲ್ಲ. ದೂರಸಂಪರ್ಕ, ಅಲ್ಯೂಮಿನಿಯಂ, ಗಣಿ, ನಿರ್ಮಾಣ, ಮುದ್ರಣ, ಆಹಾರ ಸಂಸ್ಕರಣೆ, ಚಿಲ್ಲರೆ ಮಾರಾಟ, ರಾಸಾಯನಿಕ– ಹೀಗೆ ಬಹುತೇಕ ಉದ್ಯಮಗಳ ಒಡೆಯ ಈ ಕಾರ್ಲೋಸ್.

ಕಾರ್ಲೋಸ್‌ನ ತಂದೆ ಮೆಕ್ಸಿಕೋಗೆ ವಲಸೆ ಬಂದ ಲೆಬನಾನಿ ಪ್ರಜೆ. ಬರಿಗೈಯಲ್ಲಿ ಬಂದ ಆತ ಸಣ್ಣ ಅಂಗಡಿಯೊಂದನ್ನು ತೆರೆದ. ಬಳಿಕ ರಿಯಲ್ ಎಸ್ಟೇಟ್‌ಗೆ ಕೈ ಇಕ್ಕಿದ. ಅಲ್ಪ ಸ್ವಲ್ಪ ಹಣ ಆಗುವುದರೊಳಗೆ ಆತನಿಗೆ ಹೃದಯಾಘಾತ ಆಯಿತು. ಅಪ್ಪ ಸತ್ತಾಗ ಕಾರ್ಲೋಸ್‌ಗೆ ಇನ್ನೂ 12ರ ಎಳೆಪ್ರಾಯ. ತಂದೆಯ ವ್ಯಾಪಾರವನ್ನು ಮುಂದುವರಿಸಿದ ಕಾರ್ಲೋಸ್ ಲೆಕ್ಕದಲ್ಲಿ ಬಲುಚುರುಕು. ಹಾಗಾಗಿಯೇ ಆತ ಷೇರು ದಲ್ಲಾಳಿಯಾದ. ಬುದ್ಧಿವಂತಿಕೆಯಿಂದ ಷೇರುಗಳ ಭವಿಷ್ಯವನ್ನು ಲೆಕ್ಕ ಹಾಕಿ ಹಣ ಹೂಡತೊಡಗಿದ. ಕುಟುಂಬ ಕಂಪೆನಿ ಎಷ್ಟೊಂದು ಜೋರಾಗಿ ಬೆಳೆಯಿತೆಂದರೆ 26ರ ಹರೆಯದಲ್ಲಿ ಕಾರ್ಲೋಸ್ ಆಸ್ತಿಯ ಮೌಲ್ಯ 40 ದಶಲಕ್ಷ ಡಾಲರ್‌ಗೆ ಏರಿತ್ತು! 1981ರಲ್ಲಿ ಮೆಕ್ಸಿಕೋದ ಎರಡನೆ ಅತಿದೊಡ್ಡ ತಂಬಾಕು ಕಂಪೆನಿ ಸಿಗಾಟರ್‌ಅನ್ನು ಖರೀದಿಸಿದ. ವಿಶ್ವವಿಖ್ಯಾತ ಮಾರ್ಲ್‌ಬೊರೊ ಸಿಗರೇಟು ಉತ್ಪಾದಿಸುವ ಕಂಪೆನಿಯದು. ರೇನಾಲ್ಡ್ ಅಲ್ಯೂಮಿನಿಯಂ, ಹರ್ಷಿ ಕಾರ್ಪ್– ಹೀಗೆ ಒಂದೊಂದೇ ಕಂಪೆನಿಯ ಷೇರುಗಳಿಗೆ ಕೈ ಹಚ್ಚಿದ. ಒಂದೆರಡು ಭಾರೀ ಆರ್ಥಿಕ ಹೊಡೆತಗಳ ಹೊರತಾಗಿಯೂ ಕಾರ್ಲೋಸ್ ಕೈ ಇಟ್ಟದ್ದೆಲ್ಲ ಚಿನ್ನವಾದದ್ದು ಸುಳ್ಳಲ್ಲ. ತೈಲ ಬೆಲೆ ಕುಸಿತವಾಗುವುದು ಮೊದಲೇ ಊಹಿಸಿ ಹೂಡಿಕೆಯನ್ನು ದೂರಸಂಪರ್ಕಕ್ಕೆ ತಿರುಗಿಸಿದ. ಕಡಿಮೆ ಬೆಲೆಗೆ ದೊಡ್ಡ ಕಂಪೆನಿಗಳನ್ನು ಖರೀದಿಸಿ ಅತ್ಯಲ್ಪ ಅವಧಿಯಲ್ಲೇ ಲಾಭದಾಯಕವಾಗಿಸಿ ಮಾರುತ್ತಾ ಹೋದದ್ದು ಈತನ ಬುದ್ಧಿವಂತಿಕೆಗೆ ಸಾಕ್ಷಿ.

ಬೇರೆ ಶ್ರೀಮಂತರಂತೆ ಜಗತ್ತು ಸುತ್ತುವ ಹವ್ಯಾಸ ಈತನಿಗೆ ಇಲ್ಲವಂತೆ. 'ಮನೇಲಿ ಕೂತು ಇತಿಹಾಸದ ಕಥೆಗಳನ್ನು ಓದುವುದು ಖುಷಿಯ ಸಂಗತಿ. ಹೆಚ್ಚೆಂದರೆ ಬೇಸ್‌ಬಾಲ್ ಆಡಬಹುದಪ್ಪ' ಎನ್ನುತ್ತಾನೆ ಈತ! ಅತ್ಯಧಿಕ ಲಾಭ ಗಳಿಕೆಯ ಸಾಫ್ಟ್‌ವೇರ್‌ಗಳ ವಹಿವಾಟು ಮಾಡುವ ಬಿಲ್ ಗೇಟ್ಸ್ ಕೂಡಾ ಕಾರ್ಲೋಸ್‌ನನ್ನು ಸಂಪತ್ತು ಗಳಿಕೆಯಲ್ಲಿ ಹಿಂದಿಕ್ಕಲು ಆಗಿಲ್ಲ ಎನ್ನುವುದು ಕುತೂಹಲದ ಸಂಗತಿ.



# ಚೀನಾದ ಸುಂದರಿ

ಲಿ ನಾ ಎಂಬ ಟೆನಿಸ್ ತಾರೆಯ ಆಟ ನೋಡುವುದು ನಿಜಕ್ಕೂ ಸೊಗಸು. ಅದರಲ್ಲೂ ಕಳೆದ ವಾರ ಈಕೆ ವಿಶ್ವದ 'ನಂಬರ್ 2' ಮರಿಯಾ ಶೆರಪೋವಳನ್ನು ಮಣಿಸಿದ ಪಂದ್ಯ ನಿಜಕ್ಕೂ ರೋಚಕವಾಗಿತ್ತು. ಲಿ ನಾಳ ಮುಂಗೈ ಹೊಡೆತಗಳೇ ಪಂದ್ಯ ಗೆಲ್ಲಲು ಕಾರಣವಾದವು. ಜತೆಗೆ ಬಿರುಸಿನ ನೇರ ಗ್ರೌಂಡ್ ಶಾಟ್‌ಗಳು. ಡಬಲ್ಸ್‌ನಲ್ಲಿ ಆಡಿದ ಅನುಭವದಿಂದಲೇ ಆಕ್ರಮಣಕಾರಿ ಬೇಸ್‌ಲೈನ್ ಹೊಡೆತಗಳನ್ನು ಲಿ ನಾ ಲೀಲಾಜಾಲವಾಗಿ ಬಾರಿಸಬಲ್ಲಳು. ಇದನ್ನು ಬರೆಯುವ ಹೊತ್ತಿಗೆ ಆಸ್ಟ್ರೇಲಿಯನ್ ಓಪನ್‌ನ ಫೈನಲ್ ಪಂದ್ಯ ಇನ್ನೂ ನಡೆದಿಲ್ಲ. ಆದರೆ ಈಕೆ ಫೈನಲ್‌ನಲ್ಲಿ ಗೆಲ್ಲುವ ಅವಕಾಶಗಳು ಹೆಚ್ಚಿವೆ.

2011ರಲ್ಲೂ ಲಿ ನಾ ಆಸ್ಟ್ರೇಲಿಯನ್ ಫೈನಲ್ ತಲುಪಿದ್ದಳು. ಅದೇ ವರ್ಷ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದುಕೊಂಡಿದ್ದಳು. ಈಗಾಗಲೆ ವಿಶ್ವ ಟೆನಿಸ್ ಅಸೋಸಿಯೇಶನ್‌ನ 7 ಮತ್ತು ಐಟಿಎಫ್‌ನ 19 ಸಿಂಗಲ್ಸ್‌ಗಳನ್ನು ಗೆದ್ದುಕೊಂಡಿರುವ ಲಿ ನಾ, ಹಿಂದಿನ ಸಾಧನೆ ನೋಡಿದ್ದರೆ ಈ ವರ್ಷ ವಿಶ್ವದ 'ನಂಬರ್ ಒನ್' ಆಗಬೇಕಿತ್ತು. 2011ರಲ್ಲಿ ಆಕೆ ವಿಶ್ವದ ನಾಲ್ಕನೇ ಸೀಡ್ ಆಟಗಾರ್ತಿಯಾಗಿದ್ದವಳು. ಈಗ ಅವಳ ರ್‍ಯಾಂಕ್ 6ಕ್ಕೆ ಇಳಿದಿದೆ. ಸತತ ಸ್ಥಿರತೆಯನ್ನು ಸಾಧಿಸುವಲ್ಲಿ ಫೇಲಾಗುವುದೇ ಈಕೆಯ ದೊಡ್ಡ ದೌರ್ಬಲ್ಯ. ಆಟದಲ್ಲಿ ವೇಗ ಇದೆಯೇ ಹೊರತು ವೈವಿಧ್ಯತೆ ಇಲ್ಲ ಎನ್ನುವುದು ಟೀಕಾಕಾರರ ದೂರು.

6ರ ವಯಸ್ಸಿನಲ್ಲಿ ಈಕೆ ಬ್ಯಾಡ್ಮಿಂಟನ್ ಅಭ್ಯಾಸದಲ್ಲಿ ತೊಡಗಿದ್ದಳು. ಏಕೆಂದರೆ ಈಕೆಯ ತಂದೆ ವೃತ್ತಿಪರ ಬ್ಯಾಡ್ಮಿಂಟನ್ ಆಟಗಾರನಾಗಿದ್ದ. 8ನೇ ವಯಸ್ಸಿನಲ್ಲಿ ಅಪ್ಪನ ಸಲಹೆಯಂತೆಯೇ ಟೆನಿಸ್ ಆಟಕ್ಕೆ ಪಕ್ಷಾಂತರ ಮಾಡಿದಳು. 14ರ ಹರೆಯದಲ್ಲಿ ಅಪ್ಪನನ್ನು ಕಳೆದುಕೊಂಡರೂ ಟೆನಿಸ್ ಮೇಲಿನ ಗಮನ ಹೋಗಲಿಲ್ಲ. ಚೀನಾದ ರಾಷ್ಟ್ರೀಯ ತಂಡಕ್ಕೆ ಸೇರ್ಪಡೆಯಾದ ಬಳಿಕ ಓಟಕ್ಕೆ ವೇಗ ಬಂತು. ಆದರೆ ರಾಷ್ಟ್ರೀಯ ತಂಡದ ಮ್ಯಾನೇಜ್‌ಮೆಂಟ್ ಜತೆ ಮುನಿಸಿಕೊಂಡು ತಂಡದಿಂದ ಹೊರ ನಡೆದು ಜರ್ನಲಿಸಂ ಪದವಿ ಕೋರ್ಸಿಗೆ ಸೇರಿಕೊಂಡಳು. ಜಿಯಾಂಗ್ ಶಾನ್ ಎನ್ನುವ ಸಹ ಆಟಗಾರನ ಜತೆಗಿನ ಈಕೆಯ ಸಂಬಂಧ, ಕೋಚ್‌ನ ಕಾಠಿಣ್ಯ, ವೈಯಕ್ತಿಕ ಕೋಚ್ ಕೊಡಲಿಲ್ಲ ಎಂಬ ಕೋಪ– ಹೀಗೆ ಈಕೆ ರಾಷ್ಟ್ರೀಯ ತಂಡ ತೊರೆಯಲು ಹಲವು ಕಾರಣಗಳನ್ನು ನೀಡಲಾಯಿತು. ಕೊನೆಗೆ ಜಿಯಾಂಗ್‌ನನ್ನೇ ಮದುವೆಯಾಗಿ ಆತನನ್ನೇ ಪರ್ಸನಲ್ ಕೋಚ್ ಆಗಿಸಿಕೊಂಡಳು! 2004ರಲ್ಲಿ ತಂಡ ಸೇರಿದರೂ, 2008ರಲ್ಲಿ ಮತ್ತೆ ರಾಷ್ಟ್ರೀಯ ತಂಡದಿಂದ ಹೊರ ಬಂದು ವೈಯಕ್ತಿಕ ಆಟಗಾರ್ತಿಯಾದಳು. ಒಟ್ಟಾರೆ ಆಟದಲ್ಲಿ ವೈವಿಧ್ಯ ಇಲ್ಲದಿದ್ದರೂ ಈಕೆಯ ಬದುಕಿನಲ್ಲಿ ಸಾಕಷ್ಟು ವೈವಿಧ್ಯವಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65